ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗ ಸಚಿವರು) :

ಅ) ನಬಾರ್ಡ್ ಯೋಜನೆಯಡಿಯಲ್ಲಿ ಕಾಮಗಾರಿಗಳನ್ನು ಪ್ರಸ್ತಾಪಿಸಲು ಸದರಿ ರಸ್ತೆ ಸೇತುವೆಗಳು ಗ್ರಾಮೀಣ ಸಂಪರ್ಕವನ್ನು ಹೊಂದಿರಬೇಕು. ಹಾಗೂ ರಾಜ್ಯವು ಶೇಕಡ 10 ರಷ್ಟು ಮೊತ್ತವನ್ನು ಭರಿಸಬೇಕಾಗಿದೆ. ವಿಶ್ವ ಬ್ಯಾಂಕ್ ಸಾಲ ಪಡೆಯಲು ಮೊದಲಿಗೆ ರಸ್ತೆಗಳ ಅಧ್ಯಯನವನ್ನು ಖಾಸಗಿ ಸಲಹೆಗಾರರಿಂದ ಕೈಗೊಂಡು ಸಲಹೆಗಾರರು ಯಾದೀಕರಿಸಿದ ರಸ್ತೆಗಳನ್ನು ವಿಶ್ವಬ್ಯಾಂಕ್‌ಗೆ ಪ್ರಸ್ತಾಪಿಸಿ ಅವರಿಂದ ಒಪ್ಪಿಗೆ ಪಡೆಯಬೇಕಾಗುತ್ತದೆ. ಹಾಗೂ ರಾಜ್ಯವು ಶೇ: 30 ರಷ್ಟು ಭರಿಸಬೇಕಿದೆ.

ಆ) ಈ ಯೋಜನೆಯು ಕ್ಷೇತ್ರವಾರು ಯೋಜನೆ ಆಗಿರುವುದಿಲ್ಲ. ಪ್ರಸ್ತಾವನೆಗಳನ್ನು ಸರ್ಕಾರದಿಂದ ರಚಿತವಾದ ಅಧಿಕಾರದತ್ತ ಸಮಿತಿಯ ಒಪ್ಪಿಗೆ ಮೇರೆಗೆ ನಬಾರ್ಡ್‌ಗೆ ಪ್ರಸ್ತಾಪಿಸಲಾಗುವುದೆ.

ಇ) ಉದ್ಭವಿಸುವುದಿಲ್ಲ. ಚಿಕ್ಕನಾಯಕನ ಹಳ್ಳಿ ತಾಲ್ಲೂಕಿಗೆ ರಸ್ತೆಗೆ ಒಪ್ಪಿತವಾದ ಅಂದಾಜು ಮೊತ್ತ 75.00 ಲಕ್ಷ ರೂ. ಗಳು

ಈ) ಹಾನಗಲ್ ತಾಲ್ಲೂಕಿಗೆ ಒಪ್ಪಿತವಾದ ಅಂದಾಜು ಮೊತ್ತ 314.31 ಲಕ್ಷ ರೂ. ಹಾಗೂ ಧಾರವಾಡ ಜಿಲ್ಲೆಗೆ ಒಪ್ಪಿತವಾದ ಅಂದಾಜು ಮೊತ್ತ 2582.71 ಲಕ್ಷ ರೂ. ಗಳು

1997-98ನೇ ಸಾಲಿನಲ್ಲಿ ಪಶುಚಿಕಿತ್ಸಾಲಯಗಳ ಮಂಜೂರಾತಿ

203 (471) ಶ್ರೀ ಜಿ. ಟಿ. ಪಾಟೀಲ್ (ಬೀಳಗಿ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ 1997-98 ನೇ ಸಾಲಿನಲ್ಲಿ ಹೊಸ ಪಶುಚಿಕಿತ್ಸಾಲಯಗಳ ಮಂಜೂರಾತಿ ನೀಡಲಾಗಿದೆಯೇ;

ಆ) ಬೀಳಗಿ ಕ್ಷೇತ್ರದಲ್ಲಿ ಇನ್ನೂ ಹಲವಾರು ಕಡೆ ಪಶುಚಿಕಿತ್ಸಾಲಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) 1998-99 ನೇ ಸಾಲಿಗೆ ಬೀಳಗಿ ಕ್ಷೇತ್ರದ ಲಿಂಗಸೂರತಗ್ಗಿ ಹಾಗೂ ಗನಿ ಗ್ರಾಮಗಳಿಗೆ ಹೊಸಹೊಸ ಪಶು ಚಿಕಿತ್ಸಾಲಯಗಳನ್ನು ಮಂಜೂರು ಮಾಡಲಾಗುವುದೆ?

ಶ್ರೀ ಬಿ. ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 1996-97 ನೇ ಸಾಲಿನ ಮಂಜೂರಾದ ಪಶುಚಿಕಿತ್ಸಾಲಯಗಳ ಆದೇಶಗಳನ್ನು 1997-98 ರಲ್ಲಿ ಜಾರಿಗೊಳಿಸಲಾಗಿದೆ.

ಆ) ಇಲ್ಲ

ಇ) ಪಶುವೈದ್ಯ ಸಂಸ್ಥೆಗಳನ್ನು ತಾಲ್ಲೂಕುಗಳಲ್ಲಿನ 1990 ರ ಜಾನುವಾರ ಗಣತಿಯನ್ನು ಆದರಿಸಿ ಪ್ರಾರಂಭಿಸಲಾಗುತ್ತಿತ್ತು ಇತ್ತೀಚೆಗೆ ರಾಜ್ಯದಲ್ಲಿ ಜಾನುವಾರು ಗಣತಿಯನ್ನು ನಡೆಸಲಾಗಿದ್ದು, ಅಂತಿಮ ವರದಿಯನ್ನು ನಿರೀಕ್ಷಿಸಲಾಗಿದ್ದು, ವರದಿ ಬಂದ ನಂತರ ಹೊಸ ಪಶುವೈದ್ಯ ಸಂಸ್ಥೆಗಳನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುವುದು